ಪ್ರಾರಂಭಿಸಲಾಗಿದೆಯೆಂದು ಹೇಳುತ್ತಾರೆ. ಆದರೆ ಇದು ಪ್ರಾರಂಭವಾಗಿದ್ದು 1998ರಲ್ಲಿ. ಅಂದರೆ ತಮ್ಮ ಪ್ರಕಾರ ಒಂದೂವರೆ ವರ್ಷದಲ್ಲಿ ಅದು ಮುಗಿಯಬೇಕು. ಆದರೆ ನಾಲ್ಕು ವರ್ಷಗಳಾದರೂ ಆ ಕೆಲಸ ಇವತ್ತಿನವರೆಗೂ ಪ್ರಗತಿಯಲ್ಲಿಲ್ಲ. ಅಲ್ಲಿನ ಜನರಿಗೆ ಕುಡಿಯುವ ನೀರಿನ ತೊಂದರೆ ಇದೆ. ಇಷ್ಟೆಲ್ಲಾ ಇದ್ದರೂ ಸರ್ಕಾರಕ್ಕೆ ಮತ್ತೆ ಹೆಚ್ಚುವರಿ ವೆಚ್ಚ ಬರುತ್ತದೆ. ಎಲ್ಲಾ ಎಂಟು ಗ್ರಾಮಗಳಿಗೆ ಸುರಕ್ಷಿತ ಕುಡಿಯುವ ನೀರಿನ ಪೂರೈಕೆ ಮಾಡಲು ಉದ್ದೇಶಿಸಿದೆ ಎಂದು ಹೇಳುತ್ತೀರಿ, ಆದರೆ ಯಾವಾಗ ನಿರ್ದಿಷ್ಟವಾಗಿ ಈ ಕಾಮಗಾರಿಯನ್ನು ಮುಗಿಸುತ್ತೇವೆಂದು ಉತ್ತರದಲ್ಲಿ ಹೇಳಿಲ್ಲ. ಆದ್ದರಿಂದ ಇನ್ನು ಎಷ್ಟು ದಿವಸಗಳಲ್ಲಿ ಆ ಭಾಗದ ಜನರಿಗೆ ಕುಡಿಯುವ ನೀರನ್ನು ಕೊಡುತ್ತೀರಿ ಎಂಬ ಬಗ್ಗೆ ನಿರ್ದಿಷ್ಟವಾದ ಭರವಸೆಯನ್ನು ಮಾನ್ಯ ಸಚಿವರು ಕೊಡಬೇಕು.

ಶ್ರೀ ಕೆ.ಬಿ. ಕೋಳಿವಾಡ್ : ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರಿಗೆ ಈ ಯೋಜನೆಯ ಬಗ್ಗೆ ಸಂಪೂರ್ಣವಾದ ಮಾಹಿತಿ ಇದೆಯೆಂದು ನಾನು ತಿಳಿದುಕೊಳ್ಳುತ್ತೇನೆ. ಈ ಕಾಮಗಾರಿಗೆ ಆಡಳಿತಾತ್ಮಕ ಮಂಜೂರು 14.1.2001 ರಂದು ಸಿಕ್ಕಿದೆ. ತಮ್ಮ ಸರ್ಕಾರ ಅಧಿಕಾರಿದಲ್ಲಿ ಇದ್ದಾಗ ಇದಕ್ಕೆ ಮಂಜೂರಿ ಪಡೆದುಕೊಳ್ಳಲು ಆಗಲಿಲ್ಲ. ನಮ್ಮ ಸರ್ಕಾರ ಬಂದಮೇಲೆ ಇದಕ್ಕೆ ಮಂಜೂರಾತಿ ಕೊಡಲಾಗಿದೆ. ಮುಂದೆ ಇದರ ಟೆಂಡರ್ ಕರೆಯತ್ತಕ್ಕದ್ದು, ಅಂದಾಜು ಮಾಡತಕ್ಕದ್ದು ಮುಂತಾದ ಎಲ್ಲಾ ಪ್ರೋಸೆಸ್ ಮುಗಿದಮೇಲೆ ಈ ಯೋಜನೆಯನ್ನು ಪ್ರಾರಂಭ, ಮಾಡಿದಂಥ ದಿನಾಂಕ 19.3.2001. ಗುತ್ತಿಗೆದಾರರಿಗೆ 19.3.2001ರಂದು ಕೆಲಸವನ್ನು ಪ್ರಾರಂಭ ಮಾಡಲು ಕೊಡಲಾಗಿದೆ. ದಿನಾಂಕ 18.11.2002ರೊಳಗಾಗಿ ಈ ಕೆಲಸವನ್ನು ಮುಗಿಸಬೇಕೆಂದು ಗುತ್ತಿಗೆದಾರನಿಗೆ ನಿಗದಿಪಡಿಸಲಾಗಿದೆ. ಆ ಅವಧಿಯೊಳಗಾಗಿಯೇ ಈ ಯೋಜನೆಯನ್ನು ಕಾರ್ಯರೂಪಕ್ಕೆ ತಂದು ಎಲ್ಲಾ ಎಂಟು ಹಳ್ಳಿಗಳಿಗೂ ನೀರನ್ನು ಕೊಡಿಸತಕ್ಕಂಥ ಜವಾಬ್ದಾರಿ ಸರ್ಕಾರದ್ದಾಗಿದೆ, ಆ ಜವಾಬ್ದಾರಿಯನ್ನು ನಾವು ನಿರ್ವಹಿಸಿಯೇ ತೀರುತ್ತೇವೆ ಎಂಬ ಮಾತನ್ನು ನಾನು ಹೇಳಿಲಿಕ್ಕೆ ಇಚ್ಛೆ ಪಡುತ್ತೇನೆ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಕೇಳಬೇಕಾಗಿರುವ ಮಾನ್ಯ ಸದಸ್ಯರಾದ ಚಲುವರಾಯಸ್ವಾಮಿಯವರು ಸದನದಲ್ಲಿ ಹಾಜರಿಲ್ಲ. ಅವರನ್ನು ನಂತರ ಕರೆಯುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರ ಪ್ರಶ್ನೆಗೆ ಉತ್ತರಿಸಬೇಕಾದ ಮಾನ್ಯ ಸಚಿವರು ಇನ್ನೂ ಸದನಕ್ಕೆ ಆಗಮಿಸಿಲ್ಲ. ಅದನ್ನೂ ಸಹ ನಂತರ ತೆಗೆದುಕೊಳ್ಳುತ್ತೇನೆ. ಈಗ ಮುಂದಿನ ಪ್ರಶ್ನೆಯನ್ನು ಶ್ರೀ ಎಂ.ಪಿ. ಅಪ್ಪಚ್ಚು ರಂಜನ್‌ರವರು ಕೇಳಬೇಕು.

ಕೊಡಗು ಜಿಲ್ಲೆಯಲ್ಲಿ ಗುತ್ತಿಗೆ ಆಧಾರದ ವೈದ್ಯ ಸಿಬ್ಬಂದಿ ನೇಮಕಾತಿ

19(92) - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ (ಸೋಮವಾರಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವಾಗಿನಿಂದ ಗುತ್ತಿಗೆ ಆಧಾರದ ವೈದ್ಯ ಸಿಬ್ಬಂದಿಗಳನ್ನು ಸರ್ಕಾರ ನೇಮಿಸಿಕೊಂಡಿದೆ; ಜಿಲ್ಲಾವಾರು ವಿವರ ನೀಡುವುದು;

ಅ) ಇವರುಗಳನ್ನೆಲ್ಲಾ ಖಾಯಂಗೊಳಿಸಲು ಸರ್ಕಾರ ನಿರ್ಧರಿಸಿದೆಯೇ; ಎಷ್ಟು ವರ್ಷ ಸೇವೆ ಸಲ್ಲಿಸಿದವರನ್ನು ಖಾಯಂ ಮಾತಿಗೆ ಪರಿಗಣಿಸಲಾಗುತ್ತದೆ.

ಇ) ವೈದ್ಯರ ನೇರ ನೇಮಕಾತಿ ಸಂದರ್ಭದಲ್ಲಿ ಇಂತಹ ಗುತ್ತಿಗೆ ವೈದ್ಯರುಗಳನ್ನು ಏಕೆ ಸೇವೆಗೆ ಪರಿಗಣಿಸಿಲ್ಲ; ಕಾರಣ ಏನು;

ಈ) ಕೊಡಗು ಜಿಲ್ಲೆಯಲ್ಲಿ ಈ ರೀತಿ ನೇಮಕಗೊಂಡವರ ಸಂಖ್ಯೆ ಎಷ್ಟು; ಹಾಲಿ ಈ ಜಿಲ್ಲೆಯಲ್ಲಿ ವೈದ್ಯ ಸಿಬ್ಬಂದಿಗಳ ಕೊರತೆ ಇರುವುದು ಕಂಡುಬಂದಿದೆಯೇ;

ಉ) ಬಂದಿದ್ದಲ್ಲಿ, ಎಲ್ಲೆಲ್ಲಿ ವೈದ್ಯರ ನೇಮಕಾತಿಯ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 1992ರಿಂದ ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಿಸಿಕೊಳ್ಳಲಾಗಿದೆ. (ಜಿಲ್ಲಾವಾರು ಪಟ್ಟಿಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ).

ಆ) ಈಗಾಗಲೇ ಇಲ್ಲಿಯವರೆಗೆ 338 ಗುತ್ತಿಗೆ ವೈದ್ಯರುಗಳನ್ನು ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸಲಾಗಿದೆ. ಮತ್ತು 327 ಗುತ್ತಿಗೆ ವೈದ್ಯರುಗಳನ್ನು ಖಾಯಂ ಮಾಡಲು ಸರ್ಕಾರ ನಿರ್ಧರಿಸಿದೆ. ಸತತವಾಗಿ ಮೂರು ವರ್ಷಗಳ ಸೇವೆ ಪೂರ್ಣಗೊಳಿಸಿದವರನ್ನು ಹಂತ ಹಂತವಾಗಿ ಖಾಯಂ ಮಾಡುವ ಬಗ್ಗೆ ಪರಿಗಣಿಸಿಲಾಗುತ್ತಿದೆ.

ಇ) ಗುತ್ತಿಗೆ ವೈದ್ಯರನ್ನು ನೇರ ನೇಮಕಾತಿಯಲ್ಲಿ ನೇರವಾಗಿ ನೇಮಿಸಿಕೊಳ್ಳಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ ನೇರ ನೇಮಕಾತಿಗೆ ಅರ್ಜಿ ಸಲ್ಲಿಸಿರುವ ಗುತ್ತಿಗೆ ವೈದ್ಯರುಗಳನ್ನು ನಿಯಮಾನುಸಾರ ಅಯ್ಕೆಯಾದಲ್ಲಿ ನೇರ ನೇಮಕಾತಿ ಮೂಲಕ ಪರಿಗಣಿಸಲಾಗುವುದು.

ಈ) ಕೊಡಗು ಜಿಲ್ಲೆಯಲ್ಲಿ ಗುತ್ತಿಗೆ ಆಧಾರದ ಮೇಲೆ 32 ವೈದ್ಯರುಗಳನ್ನು ನೇಮಿಸಿಕೊಳ್ಳಲಾಗಿದೆ. ಈ ಜಿಲ್ಲೆಯಲ್ಲಿ 37 ವೈದ್ಯರುಗಳ ಹುದ್ದೆ ಖಾಲಿ ಇರುತ್ತದೆ.

ಉ) ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳ ಪೈಕಿ 5 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಮತ್ತು 12 ತಜ್ಞ ವೈದ್ಯರ ಹುದ್ದೆಗಳನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ ಇವರು ಭರ್ತಿ ಮಾಡಿರುತ್ತಾರೆ. ಉಳಿದ ಹುದ್ದೆಗಳನ್ನು ವರ್ಗಾವಣೆಗಳಿಂದ, ಗೌರವಾರ್ಥ ವೈದ್ಯರುಗಳಿಂದ ತಜ್ಞ ವೈದ್ಯರುಗಳಿಂದ, ಸಮಾಲೋಚಕರುಗಳಿಂದ ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

(ಖಾಲಿ ಹುದ್ದೆಗಳ ವಿವರಗಳನ್ನು ಅನುಬಂಧ-2ರಲ್ಲಿ ನೀಡಿದೆ.)

ಅನುಬಂಧ - 2

ಗುತ್ತಿಗೆ ಆಧಾರ ಮೇಲೆ ನೇಮಕಗೊಂಡ ವೈದ್ಯರುಗಳ ಜಿಲ್ಲಾವಾರು ವಿವರ

ಕ್ರಮ ಸಂಖ್ಯೆ	ಜಿಲ್ಲೆ	ನೇಮಕ ಗೊಂಡಿರುವ ವೈದ್ಯರ ಸಂಖ್ಯೆ
1	ಬೆಂಗಳೂರು ನಗರ ಜಿಲ್ಲೆ	6
2	ಬೆಂಗಳೂರು ಗ್ರಾಮಾಂತರ	30
3	ಕೋಲಾರ	43
4	ತುಮಕೂರು	87
5	ಚಿತ್ರದುರ್ಗ	81
6	ಶಿವಮೊಗ್ಗ	99
7	ದಾವಣಗೆರೆ	52
8	ಮೈಸೂರು	83
9	ಮಂಡ್ಯ	81
10	ದಕ್ಷಿಣಕನ್ನಡ	47
11	ಕೊಡಗು	44
12	ಹಾಸನ	101
13	ಚಿಕ್ಕಮಗಳೂರು	54
14	ಉಡುಪಿ	23
15	ಚಾಮರಾಜನಗರ	22
16	ಬೆಳಗಾಂ	109
17	ಧಾರವಾಡ	39
18	ಬಿಜಾಪುರ	81
19	ಕಾರವಾರ	54
20	ಹಾವೇರಿ	38
21	ಗದಗ್	21

1	2	3
22	ಬಾಗಲಕೋಟೆ	27
23	ಗುಲ್ಬರ್ಗಾ	104
24	ಬೀದರ್	50
25	ರಾಯಚೂರು	42
26	ಬಳ್ಳಾರಿ	51
27	ಕೊಪ್ಪಳ	39
		ಒಟ್ಟು 1508

ಟಿಪ್ಪಣಿ :- ಒಟ್ಟು 1508 ಗುತ್ತಿಗೆ ವೈದ್ಯರುಗಳು ನೇಮಕಗೊಂಡಿದ್ದು, ಇವರುಗಳಲ್ಲಿ 318 ವೈದ್ಯರುಗಳನ್ನು ಖಾಯಂಗೊಳಿಸಲಾಗಿದೆ. 327 ವೈದ್ಯರನ್ನು ಖಾಯಂಗೊಳಿಸಲು ಕರಡು ನಿಯಮ ಪ್ರಕಟಿಸಲಾಗಿದೆ.

ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ

1	ಪ್ರಾಥಮಿಕ ಆರೋಗ್ಯ ಕೇಂದ್ರ, ದೊಡಕೇರಿ	- 1
2	ಸಂಚಾರಿ ಗಿರಿಜನ ಆರೋಗ್ಯ ಘಟಕ, ಕಲ್ಲಹಳ್ಳಿ	- 1
3	ಪ್ರಾಆಕೇಂದ್ರ, ಭಾಗಮಂಡಲ	- 1
4	ಪ್ರಾಆಕೇಂದ್ರ, ನಾಮೊಕ್ಲು	- 1
5	ಪ್ರಾಆಕೇಂದ್ರ, ನುರಲಬೈ	- 1

ತಜ್ಞ ವೈದ್ಯರು

6	ಪ್ರಾಆಕೇಂದ್ರ, ಕುಟ್ಟ	- 2
7	ಸಾರ್ವಜನಿಕ ಆಸ್ಪತ್ರೆ, ಗೊಣಿಕೊಪ್ಪ	- 1
8	ಪ್ರಾಆಘಟಕ, ಸಿದ್ದಾಪುರ	- 1
9	ಸಮುದಾಯ ಆರೋಗ್ಯ ಕೇಂದ್ರ, ಪಾಲಿಬೆಟ್ಟ	- 4
10	ಸಾರ್ವಜನಿಕ ಆಸ್ಪತ್ರೆ, ಕುಶಾಲನಗರ	- 1
11	ಪ್ರಾಆಕೇಂದ್ರ, ಶನಿವಾರ ಸಂತೆ	- 3
12	ಸಾರ್ವಜನಿಕ ಆಸ್ಪತ್ರೆ, ವೀರಾಜಪೇಟೆ	- 5
13	ಸಾರ್ವಜನಿಕ ಆಸ್ಪತ್ರೆ, ಸೋಮವಾರಪೇಟೆ	- 4
		37

ಅಧ್ಯಕ್ಷರು : ಮಾನ್ಯ ಮಾಲಕರೆಡ್ಡಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರಿಸಿ. ಕ್ಷಮಿಸಿ, ನಾನು ಈಗಲೂ ಮಾನ್ಯ ಮಾಲಕರೆಡ್ಡಿಯವರೇ ಆರೋಗ್ಯ ಮಂತ್ರಿಗಳಾಗಿದ್ದಾರೆಂದು ಭಾವಿಸಿದ್ದೆ, ಈಗ ಮಾನ್ಯ ಕಾಗೋಡು ತಿಮ್ಮಪ್ಪನವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾಗಿದ್ದಾರೆ. ಸ್ವಲ್ಪ ಅಭ್ಯಾಸವಾಗುವವರೆಗೂ ಕೆಲವು ದಿವಸಗಳವರೆಗೆ ಈ ರೀತಿ ಆಗುತ್ತಿರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ನಾವು ನಿನ್ನೆಯೇ ಕೇಳಿಕೊಂಡಿದ್ದೆವು. ಇಂದು ತಾವಾದರೂ ಹೊಸ ಮಂತ್ರಿಗಳ ಪರಿಚಯವನ್ನು ಸದನಕ್ಕೆ ಮಾಡಿಕೊಡಿ. ಹೊಸ ಮಂತ್ರಿಗಳೂ ಸೇರಿ ಒಟ್ಟು ಸಚಿವ ಸಂಪುಟದ ಸದಸ್ಯರು 48 ಜನ ಆಗಿರುವುದರಿಂದ ನಮಗೆ ಪ್ರಶ್ನೆಗಳನ್ನು ಕೇಳುವುದಕ್ಕೆ ಬಹಳ ಕನ್‌ಫ್ಯೂಷನ್ ಆಗುತ್ತಿದೆ. ಡಿಪಾರ್ಟ್‌ಮೆಂಟ್‌ಗಳನ್ನೆಲ್ಲಾ ಬಹಳ ಚೆನ್ನಾಗಿ ಕೆಲಸ ಇರುವವರು, ಇಲ್ಲದೇ ಇರುವವರು ಎಂದೆಲ್ಲಾ ಬೈಫರ್‌ಕೇಟ್ ಮಾಡಿದ್ದಾರೆ. ಆದ್ದರಿಂದ ದಯಮಾಡಿ ಒಂದು ಸಾರಿ ಸದನಕ್ಕೆ ಎಲ್ಲರನ್ನೂ ಇಂಟ್ರಡ್ಯೂಸ್ ಮಾಡಿಸಲು ಮಾನ್ಯ ಅಧ್ಯಕ್ಷರು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಬೇಕು. ಮಾನ್ಯ ಮುಖ್ಯಮಂತ್ರಿಗಳ ಕೈಯಲ್ಲಿ ಆಗದೇ ಹೋದರೆ ಕನಿಷ್ಠ ಪಕ್ಷ ಲಾ ಮಿನಿಸ್ಟರ್‌ರವರಾಗಲೀ ಸದನಕ್ಕೆ ಹೊಸಮಂತ್ರಿಗಳು ಮತ್ತು ಖಾತೆಗಳ ಪರಿಚಯ ಮಾಡಿಕೊಡಲಿ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಇಲ್ಲದಿರುವುದರಿಂದ ಬೇಕಾದರೆ ಲಾ ಮಿನಿಸ್ಟರ್ ಇಂಟ್ರಡ್ಯೂಸ್ ಮಾಡಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಹೊಸ ಸಚಿವರುಗಳನ್ನು ಇಂಟ್ರಡ್ಯೂಸ್ ಮಾಡಲು ನಾನು ತಮ್ಮನ್ನು ಕೋರುತ್ತಿದ್ದೇನೆ. ಹೊಸದಾಗಿ ಸಚಿವ ಸಂಪುಟದ ಪುನರ್ ರಚನೆಯಾಗಿ ಖಾತೆಗಳು ಅದಲು ಬದಲಾಗಿ, ಅವನ್ನೆಲ್ಲಾ ನಮಗೆ ಜ್ಞಾಪಕ ಇಟ್ಟುಕೊಳ್ಳುವುದು ಸ್ವಲ್ಪ ಕಷ್ಟವಾಗುತ್ತಿದೆ. ಆದ್ದರಿಂದ ಒಂದು ಸಲ ಎಲ್ಲರ ಪರಿಚಯ ಮಾಡಿಕೊಡಬೇಕು. ಖಾತೆಗಳ ಹಂಚಿಕೆಯ ನೋಟಿಫಿಕೇಷನ್ ಸಹ ನಮಗೆ ಇನ್ನೂ ಬಂದೇ ಇಲ್ಲ. ಅದನ್ನು ಕಳುಹಿಸಿದರೆ ನಮಗೆ ಬಹಳ ಅನುಕೂಲವಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಸದನಕ್ಕೆ ಹೊಸ ಸದಸ್ಯರೊಬ್ಬರೂ ಸಹ ಬಂದಿದ್ದಾರೆ. ಅವರನ್ನೂ ಸಹ ಪರಿಚಯ ಮಾಡಿಸಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ನಾಯ್ಡುರವರ ಪ್ರಶ್ನೆಗೆ ಉತ್ತರಿಸಬೇಕಾದ ಮಾನ್ಯ ಸಚಿವರಾದ ಚಂದ್ರಶೇಖರ್‌ರವರು ಸದನದಲ್ಲಿ ಇದ್ದಾರೆ. ಅವರು ಉತ್ತರ ಹೇಳಲು ಸಿದ್ಧವಾಗಿದ್ದಾರೆ. ತಾವು ಆಗಲೇ ಮಾನ್ಯ ಮಂತ್ರಿಗಳು ಇನ್ನೂ ಬಂದಿಲ್ಲವೆಂದು ಹೇಳಿದಿರಿ.

ಅಧ್ಯಕ್ಷರು : ಮಾನ್ಯ ಸಚಿವರಿಗೆ ಸಂಬಂಧಪಟ್ಟ ಪ್ರಶ್ನೆಯನ್ನು ಕರೆದಾಗ ಅವರು ಸದನಕ್ಕೆ ಬಂದಿರಲಿಲ್ಲ. ಇದೀಗ ತಾನೇ ಅವರು ಬಂದಿದ್ದಾರೆ. ಈಗಾಗಲೇ ಮಾನ್ಯ ಅಪ್ಪಚ್ಚು ರಂಜನ್‌ರವರು ಪ್ರಶ್ನೆ ಕೇಳಿದ್ದಾರೆ. ಮಾನ್ಯ ಆರೋಗ್ಯ ಮಂತ್ರಿಗಳು ಉತ್ತರಿಸಿಯಾದ ನಂತರ ಅವರ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಸುಮಾರು 1508 ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿದ್ದೇವೆ ಎಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಇವರಲ್ಲಿ 338 ವೈದ್ಯರನ್ನು ಖಾಯಂಗೊಳಿಸಲಾಗಿದೆ, 327 ವೈದ್ಯರನ್ನು ಖಾಯಂಗೊಳಿಸಲು ಕರಡು ನಿಯಮಾವಳಿಗಳನ್ನು ಪ್ರಕಟಿಸಲಾಗಿದೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಹಾಗೆಯೇ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡ ವೈದ್ಯರನ್ನು ಖಾಯಂಗೊಳಿಸಲಿಕ್ಕೆ ಕಾನೂನಿನಲ್ಲಿ ತೊಡಕು ಇದೆ ಎಂದು ಹೇಳಿದ್ದಾರೆ. ಸರ್ಕಾರ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡ ಎಲ್ಲಾ ಡಾಕ್ಟರ್‌ಗಳನ್ನೂ ಸಹ ಏಕೆ ಖಾಯಂಗೊಳಿಸಬಾರದು? ಖಾಯಂಗೊಳಿಸುವಾಗ ಯಾವ ಮಾನದಂಡದ ಮೇಲೆ ತಾವು ಖಾಯಂಗೊಳಿಸುತ್ತೀರಿ? ಅವರು ಮಾಡಿರುವ ಸರ್ವೀಸ್ ಅನ್ನು ಪರಿಗಣನೆಗೆ ತೆಗೆದುಕೊಳ್ಳುತ್ತಿರೋ? ಅಥವಾ ಅವರ ಎಜ್ಯುಕೇಷನ್ ಕ್ವಾಲಿಫಿಕೇಷನ್ ಏನಿದೆ ಅದನ್ನು ನೋಡುತ್ತೀರೋ? ಇವೆರಡರಲ್ಲಿ ಯಾವುದು ಎಂಬುದನ್ನು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ತಿಳಿಸಬೇಕು. ಕೊಡಗು ಜಿಲ್ಲೆಯಲ್ಲಿ ಸುಮಾರು 37 ವೈದ್ಯರ ಹುದ್ದೆಗಳು ಖಾಲಿ ಇವೆ. ಅವುಗಳನ್ನು ಎಷ್ಟು ದಿವಸಗಳಲ್ಲಿ ತುಂಬುತ್ತೀರಿ? ಕಳೆದ ಏಳು ವರ್ಷಗಳಿಂದಲೂ ಸಹ ನನಗೆ ಇದೇ ಉತ್ತರ ಬರುತ್ತಿದೆ. ಹಿಂದೆ ಬೇರೆ ಸರ್ಕಾರ ಇದ್ದಾಗಲೂ ನನಗೆ ಇದೇ ರೀತಿಯ ಉತ್ತರವನ್ನು ನೀಡಲಾಗಿತ್ತು. ತಮ್ಮಿಂದ ನನಗೆ ಅದೇ ರೀತಿಯ ಉತ್ತರ ಬರಬಾರದು. ನಿರ್ದಿಷ್ಟವಾಗಿ ತಾವು ಯಾವಾಗ ವೈದ್ಯರನ್ನು ನೇಮಕ ಮಾಡುತ್ತೀರಿ? ಎಂಬ ಬಗ್ಗೆ ಮಾನ್ಯ ಸಚಿವರು ನಿರ್ದಿಷ್ಟವಾದ ಉತ್ತರ ಕೊಟ್ಟರೆ ಒಳ್ಳೆಯದು ಎಂಬುದು ನನ್ನ ಅನಿಸಿಕೆಯಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರತಕ್ಕಂಥ ವೈದ್ಯರುಗಳನ್ನು ಒಂದು ಕಂತಿನಲ್ಲಿ ಖಾಯಂಗೊಳಿಸಲಾಗಿದೆ. ಎರಡನೇ ಕಂತನ್ನು ಖಾಯಂಗೊಳಿಸುವುದಕ್ಕೆ ನಾವು ಈಗಾಗಲೇ ನಿಯಮಾವಳಿಗಳನ್ನು ಬದಲಾವಣೆ ಮಾಡಿದ್ದು, ಅದು ಈಗಾಗಲೇ ಪ್ರಕಟಣೆಗೊಳಿಸಲಾಗಿದೆ. ಬೇಗನೆ ಅಂತಿಮಗೊಳಿಸಿ ಅದನ್ನು ಮಾಡುತ್ತೇವೆ. ಉಳಿದಂತಹವರನ್ನು ಮೂರು ವರ್ಷ ತುಂಬಿದ ನಂತರ ಹಂತ ಹಂತವಾಗಿ ಖಾಯಂಗೊಳಿಸತಕ್ಕಂಥ ಒಂದು ನೀತಿ ಇದೆ. ಆದರೆ ನಮಗೆ ಕಷ್ಟ ಕಾಲದಲ್ಲಿ ಇವರು ವೈದ್ಯಕೀಯ ಸೇವೆಯನ್ನು ಸಲ್ಲಿಸಿರುವ ಕಾರಣಕ್ಕಾಗಿ ಇವರನ್ನು ನಮ್ಮ ಇಲಾಖೆಯಲ್ಲೇ ಇಟ್ಟುಕೊಂಡು ಹಂತ ಹಂತವಾಗಿ ಖಾಯಂಗೊಳಿಸುವುದಕ್ಕೆ ಸೂಕ್ತವಾದ ನಿಯಮದ ಬದಲಾವಣೆ ಮಾಡತಕ್ಕ ಪ್ರಯತ್ನವನ್ನು ಮಾಡುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ. ಕೊಡಗು ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಅಲ್ಲಿ 32 ವೈದ್ಯರ ಹುದ್ದೆಗಳು ಖಾಲಿ ಇರುವುದು ನಿಜ. ಈಗಾಗಲೇ 17 ಜನರನ್ನು ಜಿಲ್ಲಾಧಿಕಾರಿಗಳು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿದ್ದಾರೆ. ಆ ಬಗ್ಗೆ ಅಂತಿಮ ಆಜ್ಞೆ ಹೊರಡಬೇಕಾಗಿದೆ. ಈಗಾಗಲೇ ಈ ದಿಸೆಯಲ್ಲಿ ರಿಕ್ರೂಟ್‌ಮೆಂಟ್ ಮಾಡತಕ್ಕ ಪ್ರೋಸಸ್ ಪೂರೈಸಿದೆ. ಇನ್ನೂ 20 ಜನರನ್ನು ತುಂಬಬೇಕಾಗಿದೆ. ಈಗ ನಮ್ಮ ಹತ್ತಿರ 550 ಜನ ನೇಮಕವಾಗಿದ್ದಾರೆ. 20 ಜನರನ್ನು ಆದ್ಯತೆ ಮೇರೆಗೆ ಈ ತಿಂಗಳೊಳಗಾಗಿ ಭರ್ತಿ ಮಾಡುತ್ತೇವೆ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೇ, ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವಾಗ ಏನೆಲ್ಲಾ ಎಲಿಜಬಲಿಟಿ ಬೇಕೋ ಅದೆಲ್ಲವನ್ನೂ ಸಹ ನೋಡಿಯೋ

ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ಅದೇ ಹಂತದಲ್ಲೇ ಅದನ್ನು ಖಾಯಂ ಆಗಿ ಏಕೆ ನೇಮಕಾತಿ ಮಾಡಿಕೊಳ್ಳಲಿಕ್ಕೆ ಆಗುತ್ತಿಲ್ಲ? ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡು ನಂತರ ಹಂತ ಹಂತವಾಗಿ ಏಕೆ ಖಾಯಂಗೊಳಿಸುತ್ತೀರಿ? ಎಲ್ಲಾ ಅರ್ಹತೆಗಳನ್ನೂ ನೋಡಿ ನೇಮಕಾತಿ ಮಾಡಿಕೊಳ್ಳುವುದರಿಂದ, ಅವರನ್ನು ಖಾಯಂ ಆಗಿಯೇ ಏಕೆ ನೇಮಕಾತಿ ಮಾಡಿಕೊಳ್ಳುವುದಿಲ್ಲ? ಇದಕ್ಕೆ ಕಾರಣಗಳೇನು?

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವುದಕ್ಕೆ ಪ್ರತ್ಯೇಕವಾದ ನಿಯಮಾವಳಿಗಳನ್ನು ಮಾಡಿ, ಆ ನಿಯಮಾವಳಿಗಳ ಪ್ರಕಾರ ನಾವು ಅವರನ್ನು ನೇಮಕಾತಿ ಮಾಡಿಕೊಂಡಿದ್ದೇವೆ. ಆ ನೇಮಕಾತಿಯಲ್ಲಿ ಇವರನ್ನು ಖಾಯಂ ಆಗಿ ತೆಗೆದುಕೊಳ್ಳುವುದಕ್ಕೆ ಅವಕಾಶ ಇಲ್ಲ. ಆದ್ದರಿಂದ ಮೂರು ವರ್ಷದ ಸೇವೆಯಾದ ನಂತರ ಹಂತ ಹಂತವಾಗಿ ಅವರನ್ನು ಖಾಯಂ ಆಗಿ ನೇಮಕ ಮಾಡಿಕೊಳ್ಳುವುದಕ್ಕೆ ಒಂದು ನೀತಿಯನ್ನು ರೂಪಿಸಿದ್ದೇವೆ. ಆದ್ದರಿಂದ ಈ ಪೊಸಿಷನ್ನೇ ನಮ್ಮ ಮುಂದೆ ಇದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ನಮ್ಮ ಹಿಂದಿನ ಆರೋಗ್ಯ ಸಚಿವರು ಸದನದಲ್ಲೇ ಕುಳಿತಿದ್ದಾರೆ. ಮಾನ್ಯ ಆರೋಗ್ಯ ಸಚಿವರಿಗೆ ನಾನು ಒಂದು ಪ್ರಶ್ನೆಯನ್ನು ಕೇಳಬಯಸುತ್ತೇನೆ. 1508 ವೈದ್ಯರನ್ನು ನೇಮಕಾತಿ ಮಾಡಿಕೊಂಡಿದ್ದೇವೆ ಎಂದು ಅಂಕಿ ಅಂಶಗಳನ್ನು ತಾವು ಹೇಳುತ್ತಿದ್ದೀರಿ. ಆದರೆ ಅವರು ನಿಜವಾಗಿ ಅಲ್ಲಿ ಹಾಜರಾಗಿ ಕಾರ್ಯನಿರ್ವಹಿಸುತ್ತಿದ್ದಾರೋ ಇಲ್ಲವೋ? ಸುಮ್ಮನೆ ಆರ್ಡರ್ ಹೊರಡಿಸಲಾಗಿದೆ ಅಷ್ಟೇ. ಅವರ್ಯಾರೂ ಅಲ್ಲಿ ಹಾಜರಾಗಿಲ್ಲ. ಅವರಲ್ಲಿ 400-500 ಜನ ಮಾತ್ರ ಹಾಜರಾಗಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ನಮ್ಮಲ್ಲಿ 21 ವೈದ್ಯರನ್ನು ನೇಮಕ ಮಾಡಲಾಗಿದೆ ಎಂದು ತೋರಿಸುತ್ತಿದ್ದೀರಿ. ಆದರೆ ವಾಸ್ತವವಾಗಿ ಅಷ್ಟು ವೈದ್ಯರು ಕಾರ್ಯನಿರ್ವಹಿಸುತ್ತಿಲ್ಲ. 500 ಜನ ಖಾಯಂ ವೈದ್ಯರನ್ನು ನೀವು ನೇಮಿಸಿದಲ್ಲಿ, ಅವರಲ್ಲಿ ಕೇವಲ 200-300 ಜನ ಮಾತ್ರ ಕರ್ತವ್ಯಕ್ಕೆ ಹಾಜರಾಗುತ್ತಾರೆ. ಹೀಗಿರುವಾಗ ನೀವು ಗುತ್ತಿಗೆ ಆಧಾರದ ಮೇಲೆ ನೇಮಿಸಿದರೆ ಅವರು ಕರ್ತವ್ಯಕ್ಕೆ ಬರುವುದೇ ಇಲ್ಲ. ನಿಮಗೆ ಖಾಯಂ ಆಗಿ ವೈದ್ಯರನ್ನು ಕೊಡಲು ಆಗದಿದ್ದರೆ ಹಳ್ಳಿಗಳಲ್ಲಿ ಇರತಕ್ಕಂಥ ಎಲ್ಲಾ ದವಾಖಾನೆಗಳನ್ನೂ ಬಂದ್ ಮಾಡಿಬಿಡಿ. ಇಲ್ಲವೇ ಪರ್ಮನೆಂಟ್ ವೈದ್ಯರನ್ನು ತುಂಬಿ. ಇದಕ್ಕೆ ಬೇಕಾದರೆ ತಾವು ಆರು ತಿಂಗಳ ಸಮಯವನ್ನು ತೆಗೆದುಕೊಳ್ಳಿ. ತಕ್ಷಣವೇ ವೈದ್ಯರ ಹುದ್ದೆಗಳನ್ನು ತುಂಬುತ್ತೀರಾ ಎಂಬ ಬಗ್ಗೆ ಮಾನ್ಯ ಸಚಿವರು ಸದನಕ್ಕೆ ಉತ್ತರ ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, 1995ರಿಂದ ಇಲ್ಲಿಯವರೆಗೆ ಒಟ್ಟು 2635 ಜನರನ್ನು ನಾವು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿದ್ದೇವೆ. ಅವರಲ್ಲಿ ಹಾಜರಾಗಿ ಈಗ ನಮ್ಮಲ್ಲಿ ಕೆಲಸ ಮಾಡುತ್ತಾ ಉಳಿದಿರತಕ್ಕಂಥವರ ಸಂಖ್ಯೆ 1508. ಆದ್ದರಿಂದ ಆ 1508 ಜನ ಏನಿದ್ದಾರೆ, ಅವರು ನಿಜಕ್ಕೂ ಕೆಲಸ ಮಾಡುತ್ತಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ನಿಮಗೆ ಉತ್ತರ ಬರುವುದರೊಳಗಾಗಿ ಒಂದಷ್ಟು ಜನ ವೈದ್ಯರು ಸೇವೆಯನ್ನು ಬಿಟ್ಟಿರುತ್ತಾರೆ. ನಮ್ಮ ಕ್ಷೇತ್ರದ ಉದಾಹರಣೆಯನ್ನೇ ಹೇಳುವುದಾದರೆ, ಕೇವಲ ಆರ್ಡರ್ ಅನ್ನು ಹೊರಡಿಸಿದ ಮಾತ್ರಕ್ಕೇ ಹುದ್ದೆಗಳು ಯಾವುವೂ ಖಾಲಿ ಇಲ್ಲವೆಂದು ತೋರಿಸುತ್ತಾರೆ. ಆರ್ಡರ್‌ಗಳನ್ನು ಹೊರಡಿಸಿದ್ದರೂ ಸಹ ಅಲ್ಲಿ ಅವರು ಹಾಜರಾಗದೇ ಹುದ್ದೆಗಳು

ಖಾಲಿ ಇವೆ. 1508ರಲ್ಲಿ ಸುಮಾರು ಅರ್ಧದಷ್ಟು ಜನ ಮಾತ್ರ ಇದ್ದಾರೆ, ಹಾಜರಾಗಿದ್ದವರೂ ಅರ್ಧದಷ್ಟು ಜನ ಬಿಟ್ಟು ಹೋಗಿರುತ್ತಾರೆ. ಇದು ಇರತಕ್ಕಂಥ ವ್ಯವಸ್ಥೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಈಗ ನಮ್ಮಲ್ಲಿ ಇರುವ ವರದಿ ಪ್ರಕಾರ ಇಷ್ಟು ಜನ ಈಗ ಕೆಲಸ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಈಗ ಖಚಿತವಾಗಿ 266 ವೈದ್ಯರ ಹುದ್ದೆಗಳು ಮಾತ್ರ ಖಾಲಿ ಇವೆ. ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ, ನಾನು ಉತ್ತರ ಕೊಡುವುದಕ್ಕೂ ವರದಿ ಕಳುಹಿಸವುದಕ್ಕೂ ಮಧ್ಯದಲ್ಲಿ ಯಾರಾದರೂ ಬಿಟ್ಟು ಹೋಗಿರಬಹುದು. ಅದಕ್ಕಾಗಿ ಮೊನ್ನೆ ನಾನು ರಾಜ್ಯದ ಎಲ್ಲಾ ಡಿ.ಹೆಚ್.ಓಗಳನ್ನು ಕರೆಸಿ ಒಂದು ವಾರದೊಳಗಾಗಿ ನಿಮ್ಮ ಆಸ್ಪತ್ರೆಯಲ್ಲಿ ಯಾರ್ಯಾರು ವೈದ್ಯರು ಹಾಜರಿಲ್ಲ? ಎಲ್ಲೆಲ್ಲಿ ಹುದ್ದೆಗಳು ಖಾಲಿ ಇವೆ ಎಂಬ ಬಗ್ಗೆ ವರದಿಯನ್ನು ಕಳುಹಿಸಲಿಕ್ಕೆ ಹೇಳಿದ್ದೇನೆ. ನೀವು ಹೇಳಿದ ರೀತಿಯಲ್ಲಿ ಯಾರಾದರೂ ಬಿಟ್ಟು ಹೋಗಿದ್ದರೆ, ಆ ಹುದ್ದೆಗಳನ್ನೂ ಭರ್ತಿ ಮಾಡಲಿಕ್ಕೆ ಕ್ರಮ ಜರುಗಿಸುತ್ತೇನೆ. ಈಗಾಗಲೇ ನಾನು ಹೇಳಿದ ಹಾಗೆ ನೇಮಕಾತಿ ಮಾಡುವ ಸಲುವಾಗಿ 550 ಜನರ ಆಯ್ಕೆ ಮಾಡಲಾಗಿದೆ. ಆಯ್ಕೆಯಾದವರ ವೆರಿಫಿಕೇಷನ್ಸ್ ಸಹ ಆಗಿದೆ. ಅಂತಿಮವಾಗಿ ಆಜ್ಞೆ ಮಾತ್ರ ಕೊಡುವುದು ಬಾಕಿ ಇದೆ. ಅದನ್ನು ಈ ತಿಂಗಳೊಳಗಾಗಿ ಕೊಡುತ್ತೇವೆ. ಎಲ್ಲಾ ಕಡೆಗಳಿಂದ ವರದಿ ಬಂದ ಮೇಲೆ ಎಲ್ಲೆಲ್ಲಿ ಹುದ್ದೆಗಳು ಖಾಲಿ ಇದೆಯೋ ಅಲ್ಲಿ ತುಂಬಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಅಲೋಪತಿ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ಅದೇ ರೀತಿಯಲ್ಲಿ ಆರ್ಯುವೇದ ಮತ್ತು ಹೋಮಿಯೋಪತಿ ವೈದ್ಯರುಗಳು ಸಹ ಗುತ್ತಿಗೆ ಆಧಾರದ ಮೇಲೆ ಎಷ್ಟೋ ಜನ ಕೆಲಸ ಮಾಡುತ್ತಿದ್ದಾರೆ. ಅವರ ಭವಿಷ್ಯವೇನು? ಅಂತಹ ಎಷ್ಟು ವೈದ್ಯರು ಕೆಲಸ ಮಾಡುತ್ತಿದ್ದಾರೆ? ಅವರನ್ನೂ ಸಹ ಖಾಯಂ ಆಗಿ ನೇಮಕಾತಿ ಮಾಡಿಕೊಳ್ಳುವುದಕ್ಕೆ ಸರ್ಕಾರ ವಿಚಾರ ಮಾಡಿದೆಯೇ? ಈಗಾಗಲೇ ಐದಾರು ವರ್ಷಗಳಿಂದ ಅವರು ಸೇವೆ ಸಲ್ಲಿಸುತ್ತಿದ್ದಾರೆ. ಪ್ರತಿ ವರ್ಷ ಅವರ ಸೇವೆಯನ್ನು ಗುತ್ತಿಗೆ ಆಧಾರದ ಮೇಲೆ ರಿನ್ಯೂವಲ್ ಮಾಡಿಕೊಳ್ಳಲಾಗುತ್ತಿದೆ. ದಯವಿಟ್ಟು ಅವರಿಗೆ ಪ್ರಾಮುಖ್ಯತೆಯನ್ನು ಕೊಡುವುದಲ್ಲದೇ, ಅವರನ್ನೂ ಸಹಾ ಖಾಯಂಗೊಳಿಸಬೇಕು ಎಂದು ನಾನು ಕೋರುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಅದಕ್ಕಾಗಿಯೇ ಪ್ರತ್ಯೇಕವಾದ ಸಚಿವರೊಬ್ಬರು ಇದ್ದಾರೆ. ಅವರು ಅದರ ಬಗ್ಗೆ ಉತ್ತರ ಕೊಡುತ್ತಾರೆ.

11.20

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರ ಇದ್ದಾಗ ನಾವು ಒಂದು ಜನರಲ್ ಆರ್ಡರ್ ಮಾಡಿದ್ದೆವು. ಡೆಪ್ಯುಟಿ ಕಮಿಷನರ್‌ಗಳಿಗೆ ಅವರವರ ಜಿಲ್ಲೆಯಲ್ಲಿರುವ ಪ್ರೈಮರಿ ಹೆಲ್ತ್ ಸೆಂಟರ್‌ಗಳಲ್ಲಿ ಇರತಕ್ಕಂತಹ ವೇಕೆನ್ಸಿಗಳಲ್ಲಿ ಅಲ್ಲಿರತಕ್ಕಂತಹ ಡಾಕ್ಟರ್ಸ್ ಬಂದು ಕೆಲಸ ಮಾಡುವುದೇ ಅದಲ್ಲಿ ಅವರನ್ನೇ ನೇಮಕ ಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೆವು. ಆ ಸರ್ಕಾರಿ ಆಜ್ಞೆಯನ್ನು ಇನ್ನೂ ರದ್ದುಗೊಳಿಸಿಲ್ಲ. ಆದರೆ ಅದು ಕಾರ್ಯಗತಗೊಳ್ಳುತ್ತಿಲ್ಲ. 1983ರಲ್ಲಿ ನಾನು ಆರೋಗ್ಯ ಸಚಿವನಾಗಿದ್ದೆ. ಅವತ್ತಿನಿಂದ ಇವತ್ತಿನವರೆಗೆ ನಮಗೆಲ್ಲರಿಗೂ

ಪ್ರಬಲವಾಗಿ ಕಾಡುತ್ತಿರುವ ಸಮಸ್ಯೆ ಎಂದರೆ ಮೆಡಿಕಲ್ ಆಫೀಸರ್‌ಗಳ ವೇಕೆನ್ಸಿ ಮತ್ತು ಲೇಡಿ ಮೆಡಿಕಲ್ ಆಫೀಸರ್, ಇವೆರಡೂ ನಮಗೆ ಸಿಗುತ್ತಿಲ್ಲ. ಇದು ನಿರಂತರವಾದುದು. ಕೆಲವರು ಫಾರೀನ್‌ಗೆ ಹೋಗುತ್ತಾರೆ, ಕೆಲವರು ನರ್ಸಿಂಗ್ ಹೋಮ್‌ಗೆ ಹೋಗುತ್ತಾರೆ. ಸಂಬಳ ಜಾಸ್ತಿ ಮಾಡಿದ ಹಾಗೆ ಬೇರೆ ಕಡೆ ಹೋಗುತ್ತಿದ್ದಾರೆ. ಈ ಸರ್ಕಾರ ಬಂದ ಮೇಲೆ ಏನು ಮಾಡಿದೆ ಎಂದರೆ, ಪ್ರೈಮರಿ ಹೆಲ್ತ್ ಯೂನಿಟ್‌ಗಳನ್ನೂ ಕೂಡ ಪ್ರೈವೇಟೈಸ್ ಮಾಡುತ್ತೇವೆಂದು ಹೊಸದಾಗಿ ಘೋಷಣೆ ಮಾಡಿದ್ದಾರೆ. ಅದು ಎಷ್ಟು ನಿಜವೊ ಗೊತ್ತಿಲ್ಲ. ನೀವು ಗರೀಬರ ಬಗ್ಗೆ ಮಾತನಾಡುವ ಜನ ಸಮಾಜವಾದಿಗಳು ಅದನ್ನೂ ಕೂಡ ಪ್ರೈವೇಟ್ ಪಾರ್ಟಿಗಳಿಗೆ ಕೊಟ್ಟರೆ ಸರ್ಕಾರ ಏನು ಉಳಿಸಿಕೊಳ್ಳುತ್ತದೋ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇದನ್ನು ಬೇಡಿಕೆಗಳ ಬಗ್ಗೆ ಚರ್ಚೆ ಮಾಡುವಾಗ ಮಾತನಾಡೋಣ. ಜಿಲ್ಲಾಧಾಕಾರಿಗಳಿಗೆ ಕೊಟ್ಟ ಅಧಿಕಾರವನ್ನು ಏತಕ್ಕಾಗಿ ವಾಪಸ್ ತೆಗೆದುಕೊಂಡಿದ್ದೀರಿ? ವಾಪಸ್ ತೆಗೆದುಕೊಳ್ಳದೇ ಇದ್ದರೆ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ನಿಮಗೆ ಆಗುತ್ತಿರುವ ತೊಂದರೆ ಏನು? ಜಿಲ್ಲಾಧಿಕಾರಿಗಳು ಸಂಬಳ ಕೊಡಲು ನಿಮ್ಮ ಟ್ರೆಜರಿಯಲ್ಲಿ ಹಣ ಏನಾದರೂ ಇದ್ದರೆ ಅದನ್ನು ಮಾಡುವುದಕ್ಕೆ ತೊಂದರೆ ಏನೆಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಹಾನರರಿ ಡಾಕ್ಟರ್ಸ್ ಬಂದರೆ ಅವರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿದೆ. ಆಕಸ್ಮಾತ್ತಾಗಿ ಯಾರಾದರೂ ವೈದ್ಯರು ವಿಸಿಟಿಂಗ್ ಇದ್ದರೆ ಅವರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಆದ್ದರಿಂದ ಇದನ್ನು ಕಟ್ಟುನಿಟ್ಟಾಗಿ ಮಾಡುವುದಕ್ಕೆ ಸೂಕ್ತ ಆದೇಶ ಹೊರಡಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಹೊಸದಾಗಿ ಜವಾಬ್ದಾರಿ ತೆಗೆದುಕೊಂಡಿದ್ದೀರಿ, ಇನ್ನೂ 15 ದಿನಗಳ ಕಾಲಾವಕಾಶ ತೆಗೆದುಕೊಳ್ಳಿ ತೊಂದರೆ ಇಲ್ಲ. It is a verysimple order. The DCs have been given powers to appoint Doctors. ಎಲ್ಲಿ ಮುಂದೆ ಬರುತ್ತಾರೆ ಅಲ್ಲಿ. ಆ ಗವರ್ನಮೆಂಟ್ ಆರ್ಡರ್ ವಿತ್‌ಡ್ರಾ ಮಾಡಿಲ್ಲ. ಆದರೆ ಅವರ ಅಪಾಯಿಂಟ್‌ಮೆಂಟ್ ಅನ್ನು ಯಾವ ಜಿಲ್ಲಾಧಿಕಾರಿಗಳು ಸಹಿತ ಮಾಡುತ್ತಿಲ್ಲ. ಸಂಬಳ ಕೊಡುವುದಕ್ಕೆ ದುಡ್ಡು ಇಲ್ಲವಾ? ಯಾಕೆ? ಏತಕ್ಕಾಗಿ ಆಗುತ್ತಿಲ್ಲ What is the problem. ಲೀವ್ ವೇಕೆನ್ಸಿ ಎಂದು ಹಿಂದೆ ರಿಸರ್ವ್ ಡಾಕ್ಟರ್ ಎಂದು ಹೇಳಿ 8 ರಿಂದ 20 ಜನ ಡಾಕ್ಟರ್‌ಗಳನ್ನು ಡಿಹೆಚ್‌ಎಗಳ ಹತ್ತಿರ ನಾವು ಇಡುತ್ತಿದ್ದೆವು. ಎಲ್ಲಿ ವೇಕೆನ್ಸಿ ಆಗುತ್ತದೆ ಅಲ್ಲಿಗೆ ತಕ್ಷಣ ಹಾಕುತ್ತಿದ್ದರು. ಈಗ ಅದು ರಿವರ್ಸ್ ಆಗಿದೆ. 5 ರಿಂದ 10 ಪ್ರೈಮರಿ ಹೆಲ್ತ್ ಸೆಂಟರ್‌ಗಳಿಗೆ ಒಬ್ಬ ಡಾಕ್ಟರ್ ರೊಟೇಟ್ ಮಾಡಬೇಕೆಂದರೆ ಹೇಗಾಗುತ್ತದೆ? ದಯವಿಟ್ಟು ಹೇಳಿ. This has been repeatedly told for the last two and a half years. ಒಂದೇ ಹೆಜ್ಜೆ ಮುಂದೆ ಹೋಗಿ ಕ್ರಾಂತಿಕಾರಿ ಬದಲಾವಣೆ ಏನೆಂದರೆ ಗ್ರಾಮೀಣ ಪ್ರದೇಶಗಳಿಗೆ ಎಲ್ಲಾ ಡಾಕ್ಟರ್‌ಗಳು ಹೋಗಿ ಕಂಪಲ್ಸರಿ ಕೆಲಸ ಮಾಡಬೇಕು ಇಲ್ಲದಿದ್ದರೆ ನಿಮ್ಮ ಡಿಗ್ರಿ ವಿತ್‌ಡ್ರಾ ಮಾಡುತ್ತೇವೆಂದು ಹೇಳಿ ಥ್ರೆಟನ್ ಮಾಡಿ ಆ ಮಂತ್ರಿಗಳು ಮನೆಗೆ ಹೊರಟುಹೋಗಿ ಬಿಟ್ಟರು. ಇವರದೇನು ಕಥೆ ನನಗೆ ಗೊತ್ತಾಗುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಅಷ್ಟೆಲ್ಲಾ ಸವಾಲು ಹಾಕಬೇಕಾದ ಅಗತ್ಯ ಇಲ್ಲ. ಕೆಲಸ ಮಾಡುವ ಜವಾಬ್ದಾರಿ, ನಿರ್ವಹಿಸುವ ಶಕ್ತಿ ಇದೆ ಅದನ್ನು ಮಾಡಿ ತೋರಿಸುತ್ತೇನೆ. ಅವರು ಕೊಟ್ಟರತಕ್ಕಂಥ ಸಲಹೆಗಳನ್ನು ಗಂಭೀರವಾಗಿ ಪರಿಶೀಲನೆ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ತರಹ ಅಸಡ್ಡೆಯಿಂದ ಉತ್ತರ ಕೊಟ್ಟರೆ ನಾವು

ಸಹಿಸಿಕೊಂಡು ಇರುವುದಕ್ಕಾಗುವುದಿಲ್ಲ. ನಾನು ಉಪ ಪ್ರಶ್ನೆ ಕೇಳುತ್ತಾ ಇದ್ದೇನೆ. ಮಾನ್ಯ ಮಂತ್ರಿಗಳು ದಯಮಾಡಿ ತಾಳ್ಮೆಯಿಂದ ಕೇಳಬೇಕು. ಕೋಪ ಮಾಡಿಕೊಳ್ಳಬಾರದು. ಇನ್ನು ಒಂದು ತಿಂಗಳು ಬೇಕಾದರೆ ತೆಗೆದುಕೊಳ್ಳಿ ಆದರೆ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಇದೆ, ಆ ಅಧಿಕಾರವನ್ನು ಚಲಾಯಿಸಲಿಕ್ಕೆ ತಾವು ಏಕೆ ಅಡ್ಡಿ ಮಾಡಿದ್ದೀರಿ ಎನ್ನುವುದನ್ನು ಕೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಇದು ಉಪ ಪ್ರಶ್ನೆ ಇದಕ್ಕೆ ಪ್ರತ್ಯೇಕವಾಗಿ ಉತ್ತರ ಹೇಳುತ್ತೇನೆ.

ಡಾ|| ಎ.ಬಿ. ಮಾಲಕರೆಡ್ಡಿ : ಮಾನ್ಯ ಅಧ್ಯಕ್ಷರೇ, ಸ್ಥಗಿತಗೊಳಿಸಿದ ಕಾರಣ ಇಷ್ಟೆ 553 ಡಾಕ್ಟರ್‌ಗಳನ್ನು ಸೆಲೆಕ್ಷನ್ ಮಾಡಿದ್ದೇವೆ, ಸಿಂಧುತ್ವ ಪ್ರಮಾಣ ಸಲುವಾಗಿ ಡಿಲೇ ಆಗಿದೆ. ಪೋಸ್ಟಿಂಗ್ ಮಾಡುವುದಕ್ಕೆ ಸ್ಥಾನ ಬೇಕು. ಆದುದರಿಂದ ಟೆಂಪರರಿಯಾಗಿ ಸ್ಥಗಿತಗೊಳಿಸಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ ಸ್ಥಗಿತಗೊಳಿಸಿರತಕ್ಕಂತಹ ವಿಚಾರ ನನ್ನ ಗಮನಕ್ಕೆ ಬಾರದೆ ಇರುವುದರಿಂದ ಈಗ ಅದನ್ನು ರಿವೋಕ್ ಮಾಡದೆ ತತ್‌ಕ್ಷಣ ಹಾಗೆಯೇ ಹೇಳುವುದಕ್ಕಾಗುವುದಿಲ್ಲ. ನಾನು ತಾವು ಹೇಳಿದ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಅದು ಹೆಚ್ಚು ಉಪಯುಕ್ತ ಎಂದು ಕಂಡು ಬಂದರೆ ಖಂಡಿತವಾಗಿ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ತಾವು ಯಾವ ರೀತಿ ಇರಬೇಕು ಎಂದರೆ, ಈ ವೇಕೆನ್ಸಿಗಳನ್ನು ಇನ್ನು 100 ದಿನಗಳಲ್ಲಿ ತುಂಬುತ್ತೇನೆಂದು ಭರವಸೆ ಕೊಡಿ.

ಶ್ರೀ ಕಾಗೋಡು ತಿಮ್ಮಪ್ಪ : ನಾನು ಹೇಳಿದ್ದೆನಲ್ಲಾ

ಅಧ್ಯಕ್ಷರು : ಒಂದು ತಿಂಗಳಲ್ಲಿ ಮಾಡುತ್ತೇವೆಂದು ಹೇಳಿ.

ಶ್ರೀ ಎ.ಆರ್. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ ರಾಜ್ಯದ ವಿವಿಧ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿರತಕ್ಕಂತಹ ಆಸ್ಪತ್ರೆಗಳನ್ನು ಸರ್ಕಾರ ಅಪ್‌ಗ್ರೇಡ್ ಮಾಡಿದ್ದನ್ನು ನಾವು ಕಾಣುತ್ತೇವೆ. ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕೂಡ ಆಗಿ ಹೊಸ ಹೊಸ ಕಟ್ಟಡಗಳು ಕೂಡ ಅಲ್ಲಿ ಹೊರಹೊಮ್ಮಿದೆ. ಆದರೆ ಅಲ್ಲಿರತಕ್ಕಂತಹ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಿದ ನಂತರ ಅಲ್ಲಿರತಕ್ಕಂತಹ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡದೆ ವೈದ್ಯರ ನೇಮಕಾತಿ ಆಗದೆ ವೈದ್ಯರು ಇಲ್ಲದೆ ಬಹಳ ಹಾನಿಯಾಗುತ್ತಿದೆ. ಹಾಗಾಗಿ ಸರ್ಕಾರ ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡಿದ ಹಾಗೆ ಆ ಹುದ್ದೆಗಳನ್ನೂ ಕೂಡ ಅಪ್‌ಗ್ರೇಡ್ ಮಾಡಿ ವೈದ್ಯರನ್ನು ನೇಮಕ ಮಾಡುವುದು ಬಹಳ ಅವಶ್ಯಕ ಎಂದು ಮಾನ್ಯ ಮಂತ್ರಿಗಳಲ್ಲಿ ತಮ್ಮ ಮುಖಾಂತರ ಹೇಳಬಯಸುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೂಡ 33 ಜನ ವೈದ್ಯರು ಇಲ್ಲದೆ ಇರುವ ಪರಿಸ್ಥಿತಿ ಇದೆ. ಮಹಿಳಾ ವೈದ್ಯರ ಹುದ್ದೆ ಎರಡು ವರ್ಷಗಳ ಹಿಂದೆ ಮಂಜೂರಾಗಿದ್ದರೂ ಕೂಡ ಯಾವುದೇ ಮಹಿಳಾ ವೈದ್ಯರು ಅಲ್ಲಿಗೆ ಬಂದಿಲ್ಲ. ಕೇವಲ ವೈದ್ಯರು ಮಾತ್ರವಲ್ಲ, ದಾದಿಯರೂ ಕೂಡ ಇಲ್ಲ. ಲ್ಯಾಬ್ ಟೆಕ್ನೀಷಿಯನ್ಸ್ ಇಲ್ಲ, ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿಯ ತಾಲ್ಲೂಕಿನಲ್ಲಿ ಮಲೇರಿಯಾ ಜಾಸ್ತಿಯಾಗಿದೆ. ಆ ಭಾಗದಿಂದ ನಮ್ಮ ತಾಲ್ಲೂಕಿನಲ್ಲಿ ಕೂಡ ಬರುತ್ತಿದೆ. ತಾಲ್ಲೂಕು ಲೆವಲ್ ಆಸ್ಪತ್ರೆಯಲ್ಲಿ ಲ್ಯಾಬ್ ಟೆಕ್ನೀಷಿಯನ್

ಇಲ್ಲದೆ ಇರುವುದರಿಂದ ಚಿಕ್ಕಮಗಳೂರಿಗೆ ಹೋಗಿ ನಾವು ಮಲೇರಿಯಾ ಆಗಿದೆ ಇಲ್ಲವೆಂದು ಪರೀಕ್ಷೆ ಮಾಡಬೇಕಾಗಿದೆ. ಆದ್ದರಿಂದ ಎರಡು ಸಮುದಾಯ ಆರೋಗ್ಯ ಕೇಂದ್ರ ಮಂಜೂರಾಗಿದ್ದರೂ ಕೂಡ ಎರಡೆರಡು ವರ್ಷ ಆಗಿದೆ ಅಲ್ಲಿಗೆ ವೈದ್ಯರ ನೇಮಕ ಮಾಡಿಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಒಬ್ಬರೇ ವೈದ್ಯರು ಇದ್ದಾರೆ. ಆದ್ದರಿಂದ ಮಾನ್ಯ ಸಚಿವರು ಮಲೇರಿಯಾ ನಿಯಂತ್ರಣ ಮಾಡುವುದಕ್ಕೆ ಕೆಲವೊಂದು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಲ್ಯಾಬ್ ಟೆಕ್ನೀಷಿಯನ್ ಕೂಡ ಜಿಲ್ಲಾಧಿಕಾರಿಗಳಿಂದ ನೇಮಕ ಮಾಡಿಕೊಡಬೇಕೆಂದು ಸಭೆಯ ಮುಖಾಂತರ ಅವರ ಗಮನಕ್ಕೆ ತರುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಉದ್ಭವಿಸುವುದಿಲ್ಲ, ಇದಕ್ಕೆ ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಚಾಮರಾಜನಗರದಲ್ಲಿ ಒಂದು ಜಿಲ್ಲಾ ಕೇಂದ್ರ ಆಸ್ಪತ್ರೆ ಇದೆ. 22 ಡಾಕ್ಟರ್ ಇರಬೇಕಾದ ಕಡೆ ಕೇವಲ ನಾಲ್ಕು ಜನ ವೈದ್ಯಾಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಆದರಿಂದ ಅದನ್ನು ಭರ್ತಿ ಮಾಡಿ ಕೊಡಲಿ ಎಂದು ನಮ್ಮ ಕೋರಿಕೆ.

ಶ್ರೀ ಕಾಗೋಡು ತಿಮ್ಮಪ್ಪ : ಇದು ಆಸ್ಪತ್ರೆಗೆ ಸಂಬಂಧಪಟ್ಟಂಥ ವಿಚಾರ ಇಲ್ಲಿ ನನಗೆ ಮಾಹಿತಿ ಇಲ್ಲದೆ ನಾನು ಹೇಗೆ ಹೇಳುವುದಕ್ಕಾಗುತ್ತದೆ? ಹುದ್ದೆ ಖಾಲಿ ಇದ್ದರೆ ನಾನು ಭರ್ತಿ ಮಾಡುವ ಕೆಲಸ ಮಾಡುತ್ತೇನೆ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೆ, ಗುತ್ತಿಗೆ ಆಧಾರದ ಮೇಲೆ ನೇಮಕವಾದ ವೈದ್ಯರು ಹಳ್ಳಿಗಾಡಿನ ಪ್ರದೇಶಗಳಲ್ಲಿ ದುಡಿಯುವುದಕ್ಕೆ ಬಯಸುವುದಿಲ್ಲ. ಜಾಗ ನೋಡುತ್ತಾರೆ, ನೋಡಿ ಒಂದು ವಾರದೊಳಗೆ ವಾಪಸ್ ಹೋಗುತ್ತಾರೆ. ಅವರ ಸಂಬಳ ಕಡಿಮೆಯಾಗುತ್ತದೆ ಎನ್ನುವ ಭಯವೋ, ನಾಳೆ ಅವರ ಭವಿಷ್ಯದ ಚಿಂತೆಯೋ? ಇದರ ಬಗ್ಗೆ ಬಹಳಷ್ಟು ಗೊಂದಲ ಇದೆ. ಸುಮಾರು ವರ್ಷಗಳಿಂದ ಈ ಕೆಲಸ ನಡೆಯುತ್ತಿದೆ. ಅದರ ಸದುಪಯೋಗವಾಗುವುದು ಬಹಳ ಕಡಿಮೆ ಇದೆ. ಹೀಗಾಗಿ ನನ್ನ ಕ್ಷೇತ್ರದಲ್ಲಿ ಒಂದು ತಾಲ್ಲೂಕಿನ 10 ಜಾಗಗಳಲ್ಲಿ ಇಬ್ಬರು ಡಾಕ್ಟರ್‌ಗಳಿದ್ದಾರೆ. ತಾಲ್ಲೂಕು ಕೇಂದ್ರಗಳಲ್ಲಿ ಒಬ್ಬರು ಡಾಕ್ಟರ್ ಇಲ್ಲ. ಹೀಗಿರುವ ಪರಿಸ್ಥಿತಿಯಲ್ಲಿ ಒಂದು ಕ್ರಾಶ್‌ಪ್ರೋಗ್ರಾಂ ಹಾಕಿ ಅದನ್ನು ಈ ಹಿನ್ನಲೆಯಲ್ಲಿ ಏನಾದರೂ ವಿಶಿಷ್ಟವಾದಂತಹ ಆಕರ್ಷಣೆ ಕೊಟ್ಟು ಡಾಕ್ಟರ್‌ಗಳ ನೇಮಕಾ ಮಾಡಿ ಇಷ್ಟು ಕಾಲೇಜುಗಳು, ಇಷ್ಟು ಡಾಕ್ಟರ್ ಹೊರಗೆ ಬರುತ್ತಿದ್ದಾರೆ, ಆದರೂ ಹಳ್ಳಿಗಳಲ್ಲಿ ಹೋಗಿ ಕೆಲಸ ಮಾಡುವುದಕ್ಕೆ ತಯಾರಿಲ್ಲ. ಅದನ್ನು ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಸದಸ್ಯರು ಹೇಳಿರತಕ್ಕಂಥ ಸಲಹೆ ಸೂಚನೆಗಳ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಜೊತೆಗೆ ಈ ಸದನ ಮುಗಿಯುವುದರೊಳಗೆ ಪ್ರತಿ ಜಿಲ್ಲೆಯ ಶಾಸಕರನ್ನು ಒಂದು ಸಾರಿ ಕರೆಸಿ ಅವರವರ ಕ್ಷೇತ್ರದಲ್ಲಿ ಎಷ್ಟೆಷ್ಟು ಖಾಲಿ ಹುದ್ದೆಗಳು ಇದ್ದಾವೆ ಎಂದು ಖಚಿತಪಡಿಸಿಕೊಂಡು ಅದರ ಪ್ರಕಾರ ಭರ್ತಿ ಮಾಡುವ ಕೆಲಸ ಮಾಡುತ್ತೇನೆ.

11.30 ಎ.ಎಂ

ಅಧ್ಯಕ್ಷರು : ರಾಮದಾಸ್‌ರವರೆ, ತಾವು ಉಪ ಪ್ರಶ್ನೆ ಕೇಳಿ. ನಿಮ್ಮದೇ ಕಡೆಯದು.

ಶ್ರೀ ಎಂ.ಡಿ. ಲಕ್ಷ್ಮಿ ನಾರಾಯಣ್ : ಮಾನ್ಯ ಅಧ್ಯಕ್ಷರೇ, ಪ್ರತಿ ಮೂರು ತಿಂಗಳಿಗೊಮ್ಮೆ ಡಾಕ್ಟರ್‌ಗಳ ವರ್ಗಾವಣೆ ಗ್ರಾಮಾಂತರ ಪ್ರದೇಶದಿಂದ ಆಗುತ್ತಿದೆ. ಇದು ಬಹಳ ಮುಖ್ಯವಾದ ವಿಷಯ.

ಅಧ್ಯಕ್ಷರು : ಒಂದು ಪ್ರಶ್ನೆಗೆ ಹದಿನೈದು ನಿಮಿಷ ತೆಗೆದುಕೊಂಡರೆ, how can I manage common tell me, Then I will withhold all the ten questions ನನಗೆ ಗೊತ್ತಿದೆ ಇದು ಮುಖ್ಯವಾದ ವಿಷಯ ಎಂದು. ಆದರೆ ಎಲ್ಲರೂ ಅವರವರ ಕ್ಷೇತ್ರದ ಬಗ್ಗೆ ಹೇಳುತ್ತಿದ್ದರೆ ಹೇಗೆ? ಈಗಾಗಲೇ ಮಂತ್ರಿಗಳು ಉತ್ತರ ಕೊಡುತ್ತಾ ಈ ಅಧಿವೇಶನ ಮುಗಿಯುವಷ್ಟರೊಗಳಗೆ ಆಯಾಯ ಶಾಸಕರುಗಳನ್ನು ನನ್ನ ಛೇಂಬರ್ಸ್‌ಗೆ ಕರೆಸಿ ಎಲ್ಲೆಲ್ಲಿ ಹುದ್ದೆಗಳು ಖಾಲಿ ಇವೆ ಅಲ್ಲಿಗೆ ಭರ್ತಿ ಮಾಡುತ್ತೇನೆ ಎಂದು ಹೇಳಿದ್ದಾರೆ. ಹಾಗಾದರೆ ಕೊನೆ ಹತ್ತು ಪ್ರಶ್ನೆಗಳನ್ನು ಮುಂದಕ್ಕೆ ಹಾಕುತ್ತೇನೆ I have no objecting for that.

ಒಬ್ಬ ಮಾನ್ಯ ಸದಸ್ಯರು : ಅಧ್ಯಕ್ಷರೆ, ತಾವು ರಿಪ್ಲಿಕ್ಟ್ ಮಾಡಿ.

ಅಧ್ಯಕ್ಷರು : ರಿಪ್ಲಿಕ್ಟ್ ಮಾಡಿ ಎಂದು ಹೇಳುತ್ತೀರಿ ಮತ್ತೆ ತಾವೇ ಎದ್ದು ಮಾತನಾಡುತ್ತೀರಿ. ಲಕ್ಷ್ಮಿ ನಾರಾಯಣ್, ತಾವು ದಯವಿಟ್ಟು ಕುಳಿತುಕೊಳ್ಳಿ. ಮಂತ್ರಿಗಳು ಉತ್ತರ ಕೊಡುತ್ತಾ ಈ ಅಧಿವೇಶನ ಮುಗಿಯುವುದರೊಳಗೆ ಆಯಾಯ ಜಿಲ್ಲೆಯ ಶಾಸಕರುಗಳನ್ನು ಕರೆಸಿ ಎಲ್ಲೆಲ್ಲಿ ಹುದ್ದೆಗಳು ಖಾಲಿ ಇವೆ ಅವುಗಳನ್ನು ಭರ್ತಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಆ ರೀತಿ ಹೇಳಿರುವುದರಿಂದ I thin that is the suffieient answer ಎಂದು ನನಗನ್ನಿಸುತ್ತದೆ.

ಶ್ರೀ ಎಂ.ಡಿ. ಲಕ್ಷ್ಮಿ ನಾರಾಯಣ್ : ಇದು ಒಂದು ರೀತಿಯಲ್ಲಿ ಹೌದಪ್ಪನ ಚಾವಡಿಯಲ್ಲಿ ಹೌದಪ್ಪ, ಇಲ್ಲಪ್ಪನ ಚಾವಡಿಯಲ್ಲಿ ಇಲ್ಲಪ್ಪ ಎನ್ನುವಂತೆ ಆಗಿದೆ.

ಅಧ್ಯಕ್ಷರು : ಒಂದು ಕೆಲಸ ಮಾಡಿ. ಅರ್ಧ ಗಂಟೆ ಕಾಲ ಚರ್ಚೆ ಮಾಡಲು ನೋಟಿಸ್ ಬರೆದು ಕಳುಹಿಸಿ ನಾನು ಅಲೋ ಮಾಡುತ್ತೇನೆ.

ಶ್ರೀ ಎಂ.ಡಿ. ಲಕ್ಷ್ಮಿ ನಾರಾಯಣ್ : ಇಲ್ಲೇನಾಗುತ್ತಿದೆ ಎಂದರೆ ಆರಾರು ತಿಂಗಳಿಗೆ ವರ್ಗಾವಣೆಗಳು ಆಗುತ್ತಿವೆ.

ಅಧ್ಯಕ್ಷರು : ಹೀಗೆ ಪ್ರಶ್ನೋತ್ತರ ಮುಂದುವರಿದರೆ ಲಾಸ್ಟ್ ಹತ್ತು ಪ್ರಶ್ನೆಗಳನ್ನು ಮುಂದಕ್ಕೆ ಹಾಕುತ್ತೀನಷ್ಟೆ. ನೀವು ಒಂದು ಕೆಲಸ ಮಾಡಿ. ಅರ್ಧ ಗಂಟೆ ಕಾಲಾವಧಿ ನೋಟಿಸ್ ಅನ್ನು ಬರೆದು ಕಳುಹಿಸಿ. ನಾನು ಮುಂದಿನ ಶುಕ್ರವಾರ ನಿಮ್ಮದನ್ನೇ ಫಸ್ಟ್ ಅಲೋ ಮಾಡುತ್ತೇನೆ. ಈಗ ಮಾನ್ಯ ರಾಮದಾಸ್ ನೀವು ಮಾತನಾಡಿ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ, ಕಳೆದ ಬಾರಿ ಬಜೆಟ್ ಮೇಲೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಡಾಕ್ಟರ್‌ಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವಂಥ ಸಂದರ್ಭದಲ್ಲಿ ರಿಕ್ರೂಟ್‌ಮೆಂಟ್ ಎಗೆಸಸ್ಟ್ ದಿ ಪೋಸ್ಟ್ ಮಾಡಬೇಕು. ಯಾವ ಪೋಸ್ಟ್‌ಗೆ

ಯಾವ ಗ್ರಾಮದಲ್ಲಿರುವಂಥ ಆಸ್ಪತ್ರೆಗೆ ನಾವು ರಿಕ್ರೂಟ್ ಮಾಡುತ್ತೇವೆ ಆ ಸ್ಥಳದಲ್ಲಿ ಡಾಕ್ಟರ್ ಇರಬೇಕು ಎನ್ನುವುದರ ಬಗ್ಗೆ ಚರ್ಚೆ ಆಯಿತು. ಇವೊತ್ತಿನವರೆಗೂ ಕ್ರಮ ತೆಗೆದುಕೊಂಡಿಲ್ಲ. ಡಾಕ್ಟರ್‌ನ್ನು ಆ ಗ್ರಾಮಕ್ಕೆ ಇರಬೇಕು ಎಂದು ನೇಮಕದ ಆರ್ಡರ್ ಇಶ್ಯೂ ಮಾಡಿದರೆ ಕಡೇ ಪಕ್ಷ ಮೂರು ವರ್ಷಗಳ ಮಟ್ಟಿಗಾದರೂ ಆತ ಅಲ್ಲಿಯೇ ಇರುತ್ತಾನೆ. ಆದರೆ ಇನ್‌ಫ್ಲುಯನ್ಸ್ ತೆಗೆದುಕೊಂಡು ಬಂದು ರಿಕ್ರೂಟ್‌ಮೆಂಟ್ ಆದಂಥ ವ್ಯಕ್ತಿಗಳು ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಕ್ಕೆ ಬರುವಂಥ ವ್ಯವಸ್ಥೆ ಆಗುತ್ತದೆ ಎಂದು ಚರ್ಚೆ ಆಗಿತ್ತು. ಇವೊತ್ತಿನವರೆಗೂ ಅದರ ಬಗ್ಗೆ ಕ್ರಮ ಕೈಗೊಂಡಿಲ್ಲ. ಮತ್ತೊಂದು ಕಳೆದ ಬಾರಿ ನಿರ್ಣಯ ತೆಗೆದುಕೊಂಡಿದ್ದು ಏನೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಮೂರು ಪಿ.ಹೆಚ್.ಒ.ಗಳನ್ನು ಮೆಡಿಕಲ್ ಕಾಲೇಜ್‌ಗಳು ಅಡಾಪ್ಟ್ ಮಾಡಿಕೊಳ್ಳಬೇಕು ಎಂದು ಕಳೆದ ಬಾರಿ ನಿರ್ಣಯವಾಗಿತ್ತು. ಆದರೆ ಇವೊತ್ತಿನವರೆಗೂ ಕೂಡ ಕ್ರಮಕೈಗೊಂಡಿಲ್ಲ.

Mr. SPEAKER :- That is entirely a different question. ನೀವು ಕೇಳುತ್ತಿರುವ ಪ್ರಶ್ನೆ ಈ ಪ್ರಶ್ನೆಗೆ ಪೂರಕವಾಗಿಲ್ಲ. ಇಲ್ಲಿ ಡಾಕ್ಟರ್‌ಗಳು ಇಲ್ಲ ಎನ್ನುವುದು ಮುಖ್ಯ ಪ್ರಶ್ನೆಯಾಗಿದೆ.

ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ್ : ಮಾನ್ಯ ಅಧ್ಯಕ್ಷರೆ, ವರ್ಗಾವಣೆ ನೀತಿಯಲ್ಲಿ ಆಸ್ಪತ್ರೆಯಲ್ಲಿ ಕನಿಷ್ಟ ಎರಡು ವರ್ಷಗಳ ಕಾಲ ಸೇವೆಯನ್ನು ಗ್ರಾಮೀಣ ಪ್ರದೇಶದ ಆಸ್ಪತ್ರೆಗಳಲ್ಲಿಯೇ ಸಲ್ಲಿಸಬೇಕು ಎಂದು ತಾವು ಮಾಡುತ್ತೀರಾ. ಈಗ ಮೂರು ಮೂರು ತಿಂಗಳಿಗೆ ಆರು ತಿಂಗಳಿಗೆ ವರ್ಗಾವಣೆಯಾಗುತ್ತದೆ. ಆದುದರಿಂದ ಗ್ರಾಮೀಣ ಪ್ರದೇಶದಲ್ಲಿ ಕನಿಷ್ಠ ಎರಡರಿಂದ ಮೂರು ವರ್ಷಗಳವರೆಗೆ ವೈದ್ಯರು ಸೇವೆ ಸಲ್ಲಿಸಬೇಕು ಎಂದು ಮಾಡಬೇಕೆಂದು ತಮ್ಮ ಮೂಲಕ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಸದಸ್ಯರ ಸಲಹೆ ಸೂಕ್ತವಾಗಿದೆ.

ಶ್ರೀ ಎನ್. ಚಿಲುವರಾಯ ಸ್ವಾಮಿ : ಮಾನ್ಯ ಅಧ್ಯಕ್ಷರೆ, ನನ್ನದೊಂದು ಪ್ರಶ್ನೆ ಇದೆ.

ಅಧ್ಯಕ್ಷರು : ನಾನು ಆಗಲೇ ಕರೆದೆ. ನೀವು ಇರಲಿಲ್ಲ. ಮತ್ತೆ ಒಂದು ರೌಂಡ್ ಬರಬೇಕು. ಈಗ ಮುಂದಿನ ಪ್ರಶ್ನೆ ಸಂಖ್ಯೆ 75. ಮಹಾಂತೇಶ್ ಕೌಜಲಗಿಯವರದ್ದು.

ಸವದತ್ತಿ ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ ಸರ್ಕಾರಿ ಪದವಿ ಪೂರ್ವ ಮಹಾವಿದ್ಯಾಲಯವನ್ನು ಪ್ರಾರಂಭಿಸುವುದು

20 (75) ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಸೌದತ್ತಿ ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ ಮಲಪ್ರಭಾ ಮುಳುಗಡೆ ಪ್ರದೇಶದ ಜನರ ಅನುಕೂಲತೆಗಾಗಿ ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಮಹಾವಿದ್ಯಾಲಯವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಪೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)